**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**
**ಸಿ.ಸಿ. ಸಂಖ್ಯೆ 1241/2021**

**ಫ್ರಾಸಾಃ 05**

**ಚಾಸಾಃ 17**

**ದಿನಾಂಕ 22.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿದಾರರ ಹೆಸರು | - | ನಿರ್ಮಲ |
| ಗಂಡನ ಹೆಸರು | - | ವೆಂಕಟರಮಣಪ್ಪ |
| ವಯಸ್ಸು | - | 30 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ಅರೆಕ್ಯಾತನಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

**1** ನೇ ಆರೋಪಿ ನನ್ನ ತಮ್ಮ. **2** ನೇ ಆರೋಪಿ ಗೊತ್ತಿಲ್ಲ. ಬೈಕ್ ಸಂಖ್ಯೆ ಕೆಎ-**64**-ಕ್ಯೂ-**7362** ನೇ ಬೈಕ್ ನನ್ನ ಗಂಡನ ಹೆಸರಿನಲ್ಲಿ ಇತ್ತು. ಅದನ್ನು ನನ್ನ ತಮ್ಮ ಓಡಿಸುತ್ತಿದ್ದರು. ಆ ಬೈಕ್ ನ್ನು ಏನಕ್ಕೆ ಬಳಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. (ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ್ದು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

2. ದಿ.10.10.2020 ರಂದು ನಾನು ಪೋಲಿಸ್ ರವರಿಗೆ ಕೊಟ್ಟ ಹೇಳಿಕೆಯಲ್ಲಿ ನನ್ನ ಗಂಡನ ಬೈಕ್ ನ್ನು ಚಾಸಾ-1 ರವರ ಮನೆ ಮತ್ತು ಇತರೆ ಮನೆಗಳಲ್ಲಿ ಕಳ್ಳತನ ಮಾಡಲು ಬಳಸಿದ್ದಾರೆ ಎಂದು ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲೆಗಳೆದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ  ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ.  ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ